ನಗರದ ಖಾಸಗಿ ಕಾಲೇಜುಗಳಲ್ಲಿ ಪದವಿ ತರಗತಿಗಳಿಗೆ ಪ್ರವೇಶ.

2380(2935)

ಶ್ರೀ ರಾಮಲಿಂಗಾ ರೆಡ್ಡಿ(ಜಯನಗರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಖಾಸಗಿ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿರುವ ವಿಜ್ಞಾನ, ಕಲೆ, ವಾಣಿಜ್ಯ ಸೀಟುಗಳ ಸಂಖ್ಯೆ ಎಷ್ಟು? (ಕಾಲೇಜುವಾರು ಮಾಹಿತಿ ನೀಡುವುದು).

ಇ) ಈ ಕಾಲೇಜುಗಳಲ್ಲಿ ಅದೇ ಕಾಲೇಜಿನಲ್ಲಿ 2ನೇ ಪಿಯುಸಿ ಪರೀಕ್ಷೆಯನ್ನು ಓದಿ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸು ಮಾಡಿಕೊಂಡ ವಿದ್ಯಾರ್ಥಿಗಳಿಗೆ ಪದವಿ ತರಗತಿಗಳಿಗೆ ಪ್ರವೇಶವನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಆದ್ದರಿಂದ ಅದೇ ಕಾಲೇಜಿನಲ್ಲಿ ಓದಿದ ಎಲ್ಲಾ ಅಭ್ಯರ್ಥಿಗಳಿಗೆ ಪದವಿ ತರಗತಿಗಳಿಗೆ ಪ್ರವೇಶವನ್ನು ನೀಡಬೇಕೆಂದು ಸರ್ಕಾರ ಆದೇಶಿಸುತ್ತದೆಯೇ?

ಡಾ: ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) ಅನುದಾನಿತ ಕಾಲೇಜುಗಳು - 44

ಅನುದಾನರಹಿತ ಕಾಲೇಜುಗಳು - 100

ಆ) ಅನುಬಂಧದಲ್ಲಿ ನೀಡಲಾಗಿದೆ

ಇ) ಇಲ್ಲ

ಈ) ಇಲ್ಲ

ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಸ್ಥಾಪನೆ.

2381(2936)

ಶ್ರೀ ರಾಮಲಿಂಗಾರೆಡ್ಡಿ(ಜಯನಗರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಸ್ಥಾಪಿಸಲಾಗಿದೆಯೆ?

ಆ) ಹಾಗಿಲ್ಲದಿದ್ದಲ್ಲಿ ಈ ಆಸ್ಪತ್ರೆಯಲ್ಲಿ ಬ್ಲಡ್‌ಬ್ಯಾಂಕ್ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೆ?

ಇ) ಈ ಆಸ್ಪತ್ರೆಗೆ ಪ್ರತಿದಿನ ಬೇಕಾಗುವ ಸರಾಸರಿ ರಕ್ತದ ಬೇಡಿಕೆ ಎಷ್ಟು?

ಡಾ. ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಆಗಿದೆ.

ಆ) ಉದ್ಭವಿಸುವುದಿಲ್ಲ

ಇ) ದಿನವಹಿ 5 ರಿಂದ 7 ಶೀಶೆಗಳು.

ಸರ್ಕಾರಿ ಆಸ್ಪತ್ರೆಗಳಿಗೆ ಆಧುನಿಕ ಉಪಕರಣ ನೀಡುವ ಕುರಿತು.

2382(2937)

ಶ್ರೀ ರಾಮಲಿಂಗಾರೆಡ್ಡಿ(ಜಯನಗರ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಂಗಳೂರಿನ ವಿಕ್ಟೋರಿಯಾ ಹಾಗೂ ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆಗಳಿಗೆ ಸರ್ಕಾರ ಆಧುನಿಕ ವೈದ್ಯಕೀಯ ಉಪಕರಣಗಳನ್ನು ನೀಡಲು ಕ್ರಮ ಕೈಗೊಂಡಿದೆಯೇ?

2. ಹಾಗಿದ್ದಲ್ಲಿ ಹೊಸದಾಗಿ ಈ ಆಸ್ಪತ್ರೆಗಳಿಗೆ 2000-2001ರಲ್ಲಿ ಒದಗಿಸಲಿರುವ ಉಪಕರಣಗಳು ಯಾವುವು?

3. ಇದಕ್ಕಾಗಿ ಖರ್ಚು ಮಾಡಲಿರುವ ಹಣ ಎಷ್ಟು?

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ಹೌದು.

ಆ) ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಈ ಆಸ್ಪತ್ರೆಗಳಿಗೆ ಖರೀದಿಸುವ ಉಪಕರಣಗಳ ಏವರಗಳನ್ನು ಮುಂದೆ ಅಂತಿಮಗೊಳಿಸಲಾಗುವುದು.